# ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ಪ್ರೊ.ಪಿ.ಶ್ರೀಕೃಷ್ಣ ಭಟ್ ಅವರ ಕೊಡುಗೆ

ಡಾ. ಅಶೋಕಬಾಬು ಎನ್. ಕಾವಲ್
ಕನ್ನಡ ವಿಭಾಗ
ಸಹಾಯಕ ಪ್ರಾಧ್ಯಾಪಕರು
ಅಮಿಟಿ ವಿಶ್ವವಿದ್ಯಾಲಯ ಬೆಂಗಳೂರು - ೫೬೨೧೦೦

ಕಾಸರಗೋಡಿನ ಪುತ್ರೋಡಿ ಎಂಬಲ್ಲಿ ಜನಿಸಿದ ಶ್ರೀಕೃಷ್ಣಭಟ್ಟರು ಖ್ಯಾತ ವಿದ್ವಾಂಸರು, ಭಾಷಾ ಪಂಡಿತರು ಸಂಶೋಧನಾ ಕ್ಷೇತ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಪ್ರಸಿದ್ಧರಾಗಿದ್ದಾರೆ. ಇವರು ಅನೇಕ ಕೃತಿಗಳನ್ನು ಪ್ರಕಟಿಸಿ ಹಳಗನ್ನಡ ಕಾವ್ಯ ಹಾಗೂ ವ್ಯಾಕರಣ ಕ್ಷೇತ್ರದಲ್ಲಿ ಗಣನೀಯ ಸೇವೆಗೈದಿದ್ದಾರೆ. ಸಂಸ್ಕೃತ ವ್ಯಾಕರಣವನ್ನು ಸಮಗ್ರವಾಗಿ ಅರಿತಂತಹ ಇವರು ಕನ್ನಡ ವ್ಯಾಕರಣ ಪರಂಪರೆಯ ಇತಿಹಾಸವನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ. ಕನ್ನಡ ಸಂಸ್ಕೃತ ವ್ಯಾಕರಣಗಳನ್ನು ಅಧ್ಯಯನ ಮಾಡಿರುವ ಇವರು ಹಳಗನ್ನಡ ಕಾವ್ಯಗಳನ್ನು ಓದುವಾಗ ಸಂಸ್ಕೃತ ವ್ಯಾಕರಣದ ಪ್ರಭಾವ ಆಗಿರುವುದನ್ನು ಮನಗಂಡಿದರು. ಕಾವ್ಯಗಳನ್ನು ಓದಿ ಪದವಿಂಗಡನೆ ಮಾಡಿದಾಗ ವ್ಯಾಕರಣದ ಅನೇಕ ಅಂಶಗಳನ್ನು ಅರ್ಥ ಮಾಡಿಕೊಳ್ಳುವ ಸಂದರ್ಭದಲ್ಲಿ ನಾವು ಎಡವಿ ಬೀಳುವುದು ಸಹಜ ಎಂದು ಅರಿತ ಇವರು ಹಳಗನ್ನಡ ವ್ಯಾಕರಣವನ್ನು ಆಧುನಿಕ ಭಾಷಾವಿಜ್ಞಾನದ ನೆಲೆಗೆ ವಿಸ್ತರಿಸಿ ವಿಶ್ಲೇಷಣೆ ಮಾಡಿರುವುದನ್ನು ನೋಡುತ್ತೇವೆ.

ಸಂಸ್ಕೃತದಲ್ಲಿ ಸಾವಿರಕ್ಕಿಂತಲೂ ಹೆಚ್ಚಿನ ವ್ಯಾಕರಣ ಗ್ರಂಥಗಳಿವೆ ಮತ್ತು ಅವುಗಳ ಚಿಂತನಾ ಕ್ರಮವನ್ನು ಕನ್ನಡ ವ್ಯಾಕರಣ ಪರಂಪರೆಯ ಹಿನ್ನೆಲೆಯಲ್ಲಿ ಚರ್ಚೆಗೆ ಒಳಪಡಿಸಿದ್ದಾರೆ. ಶ್ರೀಕೃಷ್ಣಭಟ್ಟರು ತಮ್ಮ ವಿದ್ಯಾರ್ಥಿಗಳಿಗೆ ಹಳಗನ್ನಡ ಬೋಧಿಸುವ ಸಂದರ್ಭದಲ್ಲಿ ತಮಗೆ ಎದುರಾದ ಅನೇಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಂಡು ಯಶಸ್ವಿಯಾಗಿದ್ದರು. ಈ ಪ್ರಯತ್ನದ ಫಲವಾಗಿ ಕನ್ನಡ ವ್ಯಾಕರಣ ಪರಂಪರೆಯ ಮೇಲೆ ಸಂಸ್ಕೃತದ ಪ್ರಭಾವ ಎಂಬ ಸಂಶೋಧನಾ ಪ್ರಬಂಧ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟಿಸಿದ್ದಾರೆ. ನಂತರದಲ್ಲಿ ಅವರು ತಮ್ಮ ಸಂಶೋಧನಾ ಸಂದರ್ಭದಲ್ಲೇ ಅನೇಕ ವಿಷಯಗಳನ್ನು ಕುರಿತು ಚರ್ಚಿಸಿದರು. ಆ ವಿಚಾರಗಳು ತಮ್ಮ ಪ್ರಬಂಧದ ಮಿತಿಯ ಒಳಗೆ ಬರದೇ ಇದ್ದಾಗ ಅನೇಕ ವ್ಯಾಕರಣ ಅಂಶಗಳು ಉಳಿದುಕೊಂಡು ಬಂದಿದವು. ಅಂತಹ ವಿಷಯಗಳ ಬಗ್ಗೆ ಕೂಲಂಕಷವಾಗಿ ಚರ್ಚೆಗೆ ಒಳಪಡಿಸಿ ಅಧ್ಯಯನ ಮಾಡಿ ಇಡೀ ವ್ಯಾಕರಣ ಪರಂಪರೆಯನ್ನು ಒಂದು ಕಡೆ ಕಲೆ ಹಾಕಿ ಕನ್ನಡ ಸಾಂಪ್ರದಾಯಿಕ ವ್ಯಾಕರಣಗಳು ಎಂಬ ಬೃಹತ್ ಗ್ರಂಥ ಬರೆದು ಕನ್ನಡಕ್ಕೆ ನೀಡಿದ್ದಾರೆ. ಇದು ಮುಖ್ಯವಾಗಿ ಓದುಗರಿಗೆ ಹೆಚ್ಚು ಅನುಕೂಲವಾಗುವಂತೆ ವ್ಯಾಕರಣ ವಿಚಾರಗಳನ್ನು ಚರ್ಚೆಗೆ ಒಳಪಡಿಸಿ ಅವುಗಳ ಸ್ವರೂಪ ಮತ್ತು ಹಿನ್ನೆಲೆಯ ಬಗ್ಗೆ ಸವಿವರವಾಗಿ ವಿಶ್ಲೇಷಣೆ ಮಾಡಿದ್ದಾರೆ. ಅನೇಕ ವ್ಯಾಕರಣಾತ್ಮಕ ಅಂಶಗಳನ್ನು ಚರ್ಚೆ ಮಾಡಿ ವಿದ್ವಾಂಸರ ಗಮನ ಸೆಳೆದಿದ್ದಾರೆ. ಈ ಎಲ್ಲಾ ವಿಚಾರಗಳನ್ನು ಇಟ್ಟುಕೊಂಡು ಹಳಗನ್ನಡ ವ್ಯಾಕರಣ ಅರಿತುಕೊಳ್ಳಲು ಮತ್ತು ವ್ಯಾಕರಣದ ಮೇಲೆ ಆಗಿರುವ ಸಂಸ್ಕೃತದ ಪ್ರಭಾವವನ್ನು ತಿಳಿದುಕೊಳ್ಳುವಲ್ಲಿ ಪ್ರೊ. ಪಿ. ಶ್ರೀಕೃಷ್ಣಭಟ್ಟರ ಕೊಡುಗೆ ಅಮೂಲ್ಯವಾದುದು. ಈ ಹಿನ್ನಲೆಯಲ್ಲಿ ನಾವು ಅವರನ್ನು ಅರ್ಥ ಮಾಡಿಕೊಂಡಾಗ ವ್ಯಾಕರಣ ಮತ್ತು ಭಾಷಾವಿಜ್ಞಾನ ಕ್ಷೇತ್ರದಲ್ಲಿ ಅವರ ಕೊಡುಗೆಯನ್ನು ಗುರುತಿಸಿ ಒಬ್ಬ ಶ್ರೇಷ್ಠ ವ್ಯಾಕರಣಕಾರರು ಬರೆದ ವ್ಯಾಕರಣದ ಕೃತಿಗಳ ಕುರಿತು ಚರ್ಚಿಸಿದಾಗ ಕೆಲವೊಂದು ವಿಷಯಗಳಾದರೂ ನಾವೂ ದಕ್ಕಿಸಿಕೊಳ್ಳಲು

ಸಾಧ್ಯವಾಗಬಹುದು ಎಂಬ ಆಶಯವನ್ನು ಇಟ್ಟುಕೊಂಡಿದ್ದೇನೆ. ಇಲ್ಲಿ ಮುಖ್ಯವಾಗಿ ಸಂಸ್ಕೃತ ವ್ಯಾಕರಣ ಪರಂಪರೆ ಮತ್ತು ಕನ್ನಡ ವ್ಯಾಕರಣ ಪರಂಪರೆಗಳನ್ನು ಚರ್ಚೆಗೆ ಒಳಪಡಿಸುವ ಪ್ರಯತ್ನ ಮಾಡಲಾಗಿದೆ.

ವ್ಯಾಕರಣ ಅನ್ನುವಂತದ್ದು ಷಡಾಂಗಗಳಲ್ಲಿ ಒಂದು. ಪ್ರಾಚೀನ ಕಾಲದಲ್ಲಿ ಯಾವುದೇ ಒಂದು ಶಾಸ್ತ್ರದ ಕುರಿತು ಅಧ್ಯಯನ ಮಾಡಬೇಕಾದರೇ ಭಾರತೀಯರಲ್ಲಿ ವ್ಯಾಕರಣ ಕಲಿಯುವ ಸಂಪ್ರದಾಯ ಇತ್ತು. ಸಂಸ್ಕೃತ ವ್ಯಾಕರಣ ಯಾವಾಗ ಹುಟ್ಟಿಕೊಂಡಿತ್ತು ಅದರ ಮೂಲದ ಬಗ್ಗೆ ಯಾವುದೇ ಉಲ್ಲೇಖಗಳು ದೊರೆತಿಲ್ಲ. ಈ ಷಡಾಂಗ(ವ್ಯಾಕರಣ, ನಿರುಕ್ತ, ಕಲ್ಪ, ಛಂದ, ಜ್ಯೋತಿಷ್ಯ, ಶಿಕ್ಷಾ)ಗಳಲ್ಲಿ ವ್ಯಾಕರಣಕ್ಕೆ ಮೊದಲ ಸ್ಥಾನವಿದೆ. ಇದರಲ್ಲಿ ನಿರುಕ್ತಾ ಮತ್ತು ಶಿಕ್ಷಾ ಈ ಎರಡು ನೇರವಾಗಿ ವ್ಯಾಕರಣಕ್ಕೆ ಸಂಬಂಧಿಸಿದ ಜ್ಞಾನಶಾಖೆಗಳಾಗಿವೆ. ಸಂಸ್ಕೃತ ವ್ಯಾಕರಣ ಪರಂಪರೆಯ ಇತಿಹಾಸದಲ್ಲಿ ಪಾಣಿನಿ ಪ್ರಮುಖ ವ್ಯಾಕರಣಕಾರನಾಗಿ ಕಂಡುಬರುತ್ತಾನೆ. ಈತನು ಬರೆದ ಅಷ್ಟಾಧ್ಯಾಯಿ ಸಂಸ್ಕೃತ ವ್ಯಾಕರಣದ ಮೇರುಕೃತಿಯಾಗಿದೆ. ಸಂಸ್ಕೃತ ವ್ಯಾಕರಣಕಾರರಲ್ಲಿ ಅತ್ಯಂತ ಗೌರವದ ಸ್ಥಾನವನ್ನು ಪಡೆದ ಪಾಣಿನಿ ಸಂಸ್ಕೃತ ಇತಿಹಾಸ ವ್ಯಾಕರಣವನ್ನು 'ಪಾಣಿನಿ ಪರ್ವಯುಗ, ಪಾಣಿನಿ ಯುಗ ಹಾಗೂ ಪಾಣಿನಿ ನಂತರದ ಯುಗ' ಎಂದು ಮೂರು ರೀತಿಯಾಗಿ ವಿಂಗಡನೆ ಮಾಡಲಾಗಿದೆ.

ಇಲ್ಲಿ ಪಾಣಿನಿಗಿಂತ ಮುಂಚೆ ವ್ಯಾಕರಣ ಬೆಳೆದು ಬಂದಿರಬಹುದು, ಆದರೇ ತನ್ನ ಕಾಲದವರೆಗೆ ಬಂದ ವ್ಯಾಕರಣ ಸಂಪ್ರದಾಯಗಳನ್ನು ಸರಿಯಾಗಿ ಬಳಸಿಕೊಂಡು ಅಷ್ಟಾಧ್ಯಾಯಿ ಎಂಬ ಬೃಹತ್ ಕೃತಿ ರಚಿಸಿದನು. ಪಾಣಿನಿಗಿಂತ ಮುಂಚೆ ವ್ಯಾಕರಣ ಪರಂಪರೆಗಳು ಇದ್ದವು ಎಂಬುದನ್ನು ರ್ರಹರಿಯ ಮಾತಿನಿಂದ ತಿಳಿದುಬರುತ್ತದೆ. ಅವುಗಳನ್ನು ಮೂರು ಗುಂಪುಗಳಾಗಿ ವಿಭಾಗ ಮಾಡಲಾಗಿದೆ. ೧) ಪ್ರಾತಿಶಾಖ್ಯಗಳು, ೨) ವ್ಯಾಕರಣಗಳು, ೩) ಶಿಕ್ಷಾ ಗ್ರಂಥಗಳು. ಪಾಣಿನಿಗೆ ಭದ್ರವಾದ ಅಡಿಪಾಯ ಹಾಕಿಕೊಟ್ಟಿದ್ದು ಪರ್ವದ ವ್ಯಾಕರಣಗಳು. ಪಾಣಿನಿ ಪರ್ವದಲ್ಲಿದಂತಹ ವ್ಯಾಕರಣಗಳಲ್ಲಿ ಇಂದ್ರನ ಐಂದ್ರ ವ್ಯಾಕರಣ ಅತ್ಯಂತ ಪ್ರಮುಖವಾದುದು. ಐಂದ್ರ ವ್ಯಾಕರಣದ ಪ್ರಭಾವ ಪಾಣಿನಿಯ ಮೇಲೆ ಆಗಿದರೂ ಕೂಡ ಆತನು ಐಂದ್ರ ವ್ಯಾಕರಣವನ್ನು ಅನುಸರಿಸಿಲ್ಲ ಎಂಬುದು ತಿಳಿಯಬಹುದಾಗಿದೆ.

ಪಾಣಿನಿ ಇಡೀ ವ್ಯಾಕರಣ ಪರಂಪರೆಯಲ್ಲಿಯೇ ಮಹಾನ್ ಪ್ರತಿಭಾವಂತ. ಈತ ಕ್ರಿ.ಪೂ. ೭೦೦-೬೦೦ ರ ಸುಮಾರಿನಲ್ಲಿ ಜೀವಿಸಿರಬಹುದೆಂದು ವಿದ್ವಾಂಸರ ಊಹೆಯಾಗಿದೆ. ಈತ ಬರೆದ ವ್ಯಾಕರಣ ಕೃತಿ ಅಷ್ಟಾಧ್ಯಾಯಿ. ಈ ವ್ಯಾಕರಣದಲ್ಲಿ ಒಟ್ಟು ೩೭೭೯ ಸೂತ್ರಗಳಿವೆ. ನಂತರದಲ್ಲಿ ಬಂದ ಕಾತ್ಯಾಯನ ಪಾಣಿನಿಯ ಸೂತ್ರಗಳಿಗೆ ವರ್ತಿಕಗಳನ್ನು ಬರೆದನು. ಈತನ ಕಾಲ ಸರಿಸುಮಾರು ಕ್ರಿ.ಪೂ. ೫೦೦-೪೦೦ ಆಗಿರಬಹುದು. ವರ್ತಿಕ, ಉಕ್ತ, ಅನುಕ್ತ, ದುರುಕ್ತ ವಿಷಯಗಳನ್ನು ರ್ಚಿಸಬಹುದಾಗಿದೆ. ಈ ಕಾತ್ಯಾಯನನ ವರ್ತಿಕಗಳು ಅಷ್ಟಾಧ್ಯಾಯಿಯ ಕೆಲವು ಸೂತ್ರಗಳಿಗೆ ಬರೆದ ವಿರ್ಮಾತ್ಮಕ, ವಿವರಣಾತ್ಮಕ ಟಿಪ್ಪಣಿಗಳಾಗಿವೆ. ಸುಮಾರು ೪೦೦೦ ವರ್ತಿಕಗಳು ಗದ್ಯಪದ್ಯದಲ್ಲಿವೆ. ಪಾರಿಭಾಷಿಕ ಪದಗಳಲ್ಲಿ ಕೆಲವೊಂದು ಮರ್ಪಾಡುಗಳು ಕಾಣಿಸುತ್ತವೆ.

ಪತಂಜಲಿಯು ಮಹಾಭಾಷ್ಯದ ಕರ್ತೃ. ಇವನು ಕ್ರಿ.ಪೂ. ೨ನೇ ಶತಮಾನದವನು. ಪರಂಪರೆಯ ಪ್ರಕಾರ ಪತಂಜಲಿಯು ಆದಿಶೇಷನ ಅವತಾರ. ಭಾಷಾಶೈಲಿಯಲ್ಲಿ ಹುಟ್ಟಿಕೊಂಡಂತಹ ಕೃತಿಗಳಲ್ಲಿ ಮಹಾಭಾಷ್ಯ ಅತ್ಯಂತ ಪ್ರಾಚೀನವಾದುದು. ಪಾಣಿನಿ ಕಾತ್ಯಾಯನ ಮತ್ತು ಪತಂಜಲಿ ಈ ಮೂರು ಜನ ಸಂಸ್ಕೃತ ವ್ಯಾಕರಣದಲ್ಲಿ ಮುನಿತ್ರಯರೆಂದೇ ಪ್ರಸಿದ್ಧಿ ಪಡೆದಿದ್ದಾರೆ. ಪಾಣಿನಿಯ ನಂತರದಲ್ಲಿ ಬೆಳೆದುಬಂದ ವ್ಯಾಕರಣ ಪರಂಪರೆಯಲ್ಲಿ ಅತೀ

ಸ್ಪಷ್ಟವಾದ ಎರಡು ಪ್ರವೃತ್ತಿಗಳು ಗೋಚರವಾಗುತ್ತವೆ. ಅವುಗಳಲ್ಲಿ ಒಂದು ಪಾಣಿನಿ ಪರ್ವಯುಗಕ್ಕೆ ಸಂಬಂದಪಟ್ಟದು. ಇನ್ನೊಂದು ಅಷ್ಟಾಧ್ಯಾಯಿಯೊಡನೆ ಸಂಬಂಧ ಇಟ್ಟುಕೊಂಡಿದೆ. ಕಾತಂತ್ರ, ಸಾರಸ್ವತ ವ್ಯಾಕರಣಗಳು ಮೊದಲನೆ ಪ್ರವೃತ್ತಿಯ ಪ್ರತಿನಿಧಿಗಳಾದರೆ, ಐಂದ್ರ ಸಂಪ್ರದಾಯದ ಮುಂದುವರಿಕೆ ಪಾಣಿನಿಯ ನಂತರದಲ್ಲಿ ಕಾಣುತ್ತೇವೆ.

ಪಾಣಿನಿಯ ನಂತರದಲ್ಲಿ ಇನ್ನಿತರ ಕೆಲವು ವ್ಯಾಕರಣ ಕೃತಿಗಳು ಹುಟ್ಟಿಕೊಳ್ಳಲು ಪ್ರಬಲವಾದ ಕಾರಣಗಳಿದ್ದವು. ಅದರಲ್ಲಿ ವರ್ತಿಕ, ಮಹಾಭಾಷ್ಯ ವೃತ್ತಿಗಳಿಂದಾಗಿ ಅಷ್ಟಾಧ್ಯಾಯಿಯಲ್ಲಿ ಒಂದಿಲ್ಲೊಂದು ಕೊರತೆಗಳು ಎದ್ದು ಕಾಣತೊಡಗಿದವು ಎಂಬುದನ್ನು ತಿಳಿಯಪಡಿಸುತ್ತಾರೆ. ಮುಖ್ಯವಾಗಿ ಪಾಣಿನಿಯ ವ್ಯಾಕರಣ ವೈದಿಕ ಭಾಷೆ ಮತ್ತು ಛಾಂದಸ ಸಾಹಿತ್ಯವನ್ನು ಮಾತ್ರ ದೃಷ್ಟಿಯಲ್ಲಿಟ್ಟುಕೊಂಡಿದೆ ಎಂಬ ಅಪವಾದ ಕೂಡ ಇದೆ. ಪಾಣಿನಿಯ ಮಾರ್ಗ ಕಠಿಣ ಅಂತ ಅನಿಸಿದ ಪರಿಣಾಮವಾಗಿ ಬೇರೆಬೇರೆ ವ್ಯಾಕರಣಗಳು ಮೂಡಿಬಂದವು. ಅಷ್ಟಾಧ್ಯಾಯಿ ವ್ಯಾಕರಣದಲ್ಲಿರುವ ಕೊರತೆಗಳನ್ನು ನೀಗಿಸಲು ಕೈಗೊಂಡ ಪ್ರಯತ್ನದ ಫಲವಾಗಿ ಚಾಂದ್ರ ವ್ಯಾಕರಣ ಮೂಡಿಬಂತು. ನಂತರದಲ್ಲಿ ಸರಸ್ವತಿ ಕಂಠಾಭರಣ ಮತ್ತು ಸಿದ್ಧ ಹೇಮ ಶಬ್ದಾನುಶಾಸನದಲ್ಲಿ ಈ ಪ್ರಯತ್ನ ಮತ್ತಷ್ಟು ಸುಲಭವಾಯಿತು. ಸರಸ್ವತಿ ಕಂಠಾಭರಣ ಈ ಪ್ರಯತ್ನದ ಅತ್ಯುತ್ತಮ ಕೃತಿಯಾಗಿ ಕಂಡುಬರುತ್ತದೆ. ಕಾತಂತ್ರ - ಶರ್ವವರ್ಮ, ಚಾಂದ್ರ ವ್ಯಾಕರಣ - ಚಂದ್ರಗೋಮಿ, ದೇವನಂದಿ - ಜೈನೇಂದ್ರ ವ್ಯಾಕರಣ, ಸರಸ್ವತೀ ಕಂಠಾಭರಣ - ಭೋಜರಾಜ, ಸಿದ್ಧಹೇಮ ಶಬ್ದಾನುಶಾಸನ - ಹೇಮಚಂದ್ರಸೂರಿ ಇವೆಲ್ಲವೂ ಸಹ ಪಾಣಿನಿಯ ನಂತರದಲ್ಲಿ ಬಂದಂತಹ ಮಹತ್ವಪೂರ್ಣ ವ್ಯಾಕರಣ ಕೃತಿಗಳಾಗಿವೆ.

ಕನ್ನಡ ನಾಡಿನಲ್ಲಿ ಸಂಸ್ಕೃತ ವ್ಯಾಕರಣಗಳ ಅಧ್ಯಯನ ಮತ್ತು ವಿಶಿಷ್ಟವಾದ ವ್ಯಾಕರಣ ಸಂಪ್ರದಾಯಗಳ ನರ್ಮಾಣದಲ್ಲೂ ಕನ್ನಡಿಗರ ಪಾತ್ರ ಹಿರಿದಾಗಿದೆ. ಪೂಜ್ಯಪಾದನ ಜೈನೇಂದ್ರ ವ್ಯಾಕರಣ ಮತ್ತು ಶಾಕಟಾಯನ ವ್ಯಾಕರಣಗಳು ರ್ನಾಟಕದ ಕೊಡುಗೆಗಳಾಗಿ ಕಂಡುಬರುತ್ತವೆ. ದಯಪಾಲ ಎಂಬ ವ್ಯಾಕರಣಕಾರನು 'ರೂಪಸಿದ್ಧಿ' ಎಂಬ ವ್ಯಾಕರಣ ರಚನೆ ಮಾಡಿದ್ದಾನೆ. ಹೀಗೆ ಸಂಸ್ಕೃತ ವ್ಯಾಕರಣ ಕ್ಷೇತ್ರಕ್ಕೆ ಕನ್ನಡಿಗರ ಕೊಡುಗೆ ಅಪಾರವಾದುದಾಗಿದೆ.

ಕನ್ನಡ ವ್ಯಾಕರಣ ಪರಂಪರೆ ಕನ್ನಡ ಭಾಷೆ ಮತ್ತು ವ್ಯಾಕರಣಕ್ಕೆ ಸಂಬಂಧಿಸಿದಂತೆ ಮೊತ್ತಮೊದಲಿಗೆ ನಮಗೆ ಆಧಾರಗಳು ಸಿಗುವುದು ಕವಿರಾಜಮರ್ಗದಲ್ಲಿ. ಆದರೆ ಅದಕ್ಕಿಂತ ಹಿಂದೆ ಕನ್ನಡದಲ್ಲಿ ಯಾವುದಾದರೂ ವ್ಯಾಕರಣ ಕೃತಿಗಳು ರಚನೆಯಾಗಿದ್ದು ಮತ್ತು ವ್ಯಾಕರಣಕಾರರು ಇದ್ದಿದ್ದು ನಮಗೆ ಇನ್ನೂವರೆಗೂ ಸಂಶಯಾತ್ಮಕ ವಿಷಯವಾಗಿದೆ. ಹಳಗನ್ನಡ ವ್ಯಾಕರಣ ಸ್ವರೂಪವನ್ನು ವಿವರಿಸುವ ನಾಲ್ಕು ವ್ಯಾಕರಣ ಗ್ರಂಥಗಳು ನಮಗೆ ದೊರೆತಿವೆ. ಅದರಲ್ಲಿ ಕಾವ್ಯಾವಲೋಕನದ ಮೊದಲ ಅಧಿಕರಣವಾದ ಶಬ್ದಸ್ಮೃತಿ, ರ್ನಾಟಕ ಭಾಷಾಭೂಷಣ, ಶಬ್ದಮಣಿರ್ದಪಣ ಮತ್ತು ರ್ನಾಟಕ ಶಬ್ದಾನುಶಾಸನ. ಈ ನಾಲ್ಕು ನೆಲೆಯಲ್ಲಿ ಕನ್ನಡ ವ್ಯಾಕರಣ ಪರಂಪರೆ ಆರಂಭವಾಯಿತು. ಕವಿರಾಜಮಾರ್ಗ ಒಂದು ಅಲಂಕಾರ ಗ್ರಂಥ ಅದರಲ್ಲಿ ಕೆಲವೊಂದು ವ್ಯಾಕರಣ ವಿಚಾರಗಳು ಬರುತ್ತವೆ. ರನ್ನ ಕವಿ ತನ್ನನ್ನು ಉಭಯ ವ್ಯಾಕರಣ ಪಂಡಿತನೆಂದು ಹೇಳಿಕೊಂಡಿದ್ದಾನೆ. ಹಾಗೆ ಜನ್ನನು ಸಹ "ರನ್ನ ವೈಯಾಕರಣಂ" ಎಂದು ಹೊಗಳಿರುವುದು ನೋಡಿದರೆ ರನ್ನನು ಸಹ ವ್ಯಾಕರಣ ಗ್ರಂಥ ಬರೆದನೆಂದು ಊಹಿಸಲಾಗಿದೆ. ನಯಸೇನನನ್ನು ಸಹ ಧರ್ಮ್ರೋಕ್ತರ್ನಯಸೇನಸ್ಯ ಎಂಬ ಸೂತ್ರದ ಆಧಾರದಿಂದ ನಯಸೇನನೆಂಬ ವ್ಯಾಕರಣಕಾರ ಇದ್ದ ಎಂಬುದು ತಿಳಿದುಬರುತ್ತದೆ. ಈ ಎಲ್ಲಾ ವ್ಯಾಕರಣ ಕೃತಿಗಳು ಅನುಪಲಬ್ದವಾಗಿರುತ್ತವೆ.

ಹಳಗನ್ನಡದಲ್ಲಿ ಇರುವ ನಾಲ್ಕು ವ್ಯಾಕರಣ ಕೃತಿಗಳಲ್ಲಿ ಶಬ್ದಸ್ಮೃತಿ ಶಬ್ದಮಣಿರ್ದ್ಪಣಗಳು ಕನ್ನಡ ಭಾಷೆಯಲ್ಲಿ ಬರೆದವುಗಳಾದರೇ ಕರ್ನಾಟಕ ಭಾಷಾಭೂಷಣ, ಕರ್ನಾಟಕ ಶಬ್ದಾನುಶಾಸನಗಳು ಸಂಸ್ಕೃತದಲ್ಲಿ ಬರೆದ ವ್ಯಾಕರಣ ಗ್ರಂಥಗಳಾಗಿವೆ. ನಮಗೆ ಸಿಕ್ಕಿರುವ ವ್ಯಾಕರಣ ಗ್ರಂಥಗಳಲ್ಲಿ ಶಬ್ದಸ್ಮೃತಿ ಮತ್ತು ಭಾಷಾಭೂಷಣ ಕೃತಿಗಳು ನಾಗರ್ಮ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಬಿಡಿಸಲಾರದ ಕಗ್ಗಂಟಾಗಿ ಉಳಿದಿರುವ ಸಮಸ್ಯೆಗಳಲ್ಲಿ ಇದು ಕೂಡ ಒಂದಾಗಿದೆ. ಕರ್ಣಾಟಕ ಕಾದಂಬರಿ, ಛಂಧೋಂಬುಧಿ, ಕಾವ್ಯಾವಲೋಕನ, ಕರ್ನಾಟಕ ಭಾಷಾಭೂಷಣ, ಅಭಿಧಾನ ವಸ್ತುಕೋಶ ಈ ಎಲ್ಲ ಗ್ರಂಥಗಳ ಕರ್ತೃ ನಾಗವರ್ಮನೆಂಬುದು ಸ್ಪಷ್ಟವಾಗಿದೆ. ಕರ್ಣಾಟಕ ಭಾಷಾಭೂಷಣ ಸಂಪಾದನೆ ಮಾಡಿದಂತಹ ಬಿ. ಎಲ್.ರೈಸ್ ಈ ಎಲ್ಲಾ ಗ್ರಂಥಗಳಿಗೆ ಏಕೈಕ ಕರ್ತೃ ನಾಗವರ್ಮನೊಬ್ಬನೇ ಎಂದು ಹೇಳಿಕೊಂಡಿದ್ದಾನೆ. ಶಬ್ದಸ್ಮೃತಿ: ಕಾವ್ಯಾವಲೋಕನದ ಮೊದಲ ಅಧಿಕರಣ. ಇದು ಕಂದಪದ್ಯದಲ್ಲಿದ್ದು ಒಟ್ಟು ೯೬ ಸೂತ್ರಗಳನ್ನು ಒಳಗೊಂಡಿದೆ. ಸಂಕ್ಷಿಪ್ತವಾಗಿ ಕನ್ನಡ ವ್ಯಾಕರಣ ವಿಚಾರಗಳು ನಿರೂಪಿತವಾಗಿವೆ.

ಕರ್ಣಾಟಕ ಭಾಷಾಭೂಷಣ ಇದು ಸಂಸ್ಕೃತದಲ್ಲಿರುವ ಕನ್ನಡದ ಮೊದಲ ವ್ಯಾಕರಣ. ಇದರಲ್ಲಿ ಒಟ್ಟು ೨೭೯ ಸೂತ್ರಗಳು, ಹತ್ತು ಪ್ರಕರಣಗಳಲ್ಲಿ ವ್ಯಾಕರಣ ವಿಚಾರಗಳ ಪ್ರಸ್ತಾಪವಿದೆ. ಭಾಷಾಭೂಷಣಕಾರ ತನ್ನ ಸೂತ್ರಗಳಿಗೆ ತಾನೇ ವೃತ್ತಿ ಬರೆದುಕೊಂಡಿದ್ದಾನೆ. ಮುಖ್ಯವಾಗಿ ಇಲ್ಲಿ ತಿಳಿದುಬರುವುದೇನೆಂದರೆ ನಾಗರ್ಮನು ಶಬ್ದಸ್ಮೃತಿಯನ್ನು ರಚಿಸುವುದರ ಮೂಲಕ ಶಬ್ದಮಣಿರ್ದ್ಪಣಕ್ಕೂ, ಭಾಷಾಭೂಷಣವನ್ನು ರಚಿಸುವುದರ ಮೂಲಕ ಶಬ್ದಾನುಶಾಸನಕ್ಕೂ ಗಟ್ಟಿಯಾದ ನೆಲಗಟ್ಟನ್ನು ಹಾಕಿಕೊಟ್ಟು ಕೇಶಿರಾಜ ಭಟ್ಟಕಳಂಕರಿಗೆ ದಾರಿ ಸುಗಮಗೊಳಿಸಿದ್ದಾನೆ. ಕೇಶಿರಾಜನ ಶಬ್ದಮಣಿರ್ದ್ಪಣ ಹಳಗನ್ನಡ ವ್ಯಾಕರಣಗಳಲ್ಲಿ ಉನ್ನತ ಸ್ಥಾನವನ್ನು ಅಲಂಕರಿಸಿದ ವ್ಯಾಕರಣ ಗ್ರಂಥವಾಗಿದೆ. ಕಂದ ಪದ್ಯದಲ್ಲಿರುವ ಇದು ೩೩೭ ಸೂತ್ರಗಳನ್ನು ಹೊಂದಿದೆ. ಕೇಶಿರಾಜನು ವ್ಯಾಕರಣದ ಅನೇಕ ವಿಷಯಗಳನ್ನು ಇಲ್ಲಿ ಚರ್ಚೆಗೆ ಒಳಪಡಿಸಿದ್ದಾನೆ. ಡಾ. ರ್ನೆಲ್ ಹಾಗೂ ಕಿಟೆಲ್ ಅವರ ಶಬ್ದಮಣಿದರ್ಪಣದ ಪ್ರಸ್ತಾವನೆಯಲ್ಲಿ ಹೇಳಿರುವ ಹಾಗೆ ದ್ರಾವಿಡ ಭಾಷಾ ವ್ಯಾಕರಣಗಳಲ್ಲಿಯೇ ಇದು ಶ್ರೇಷ್ಠವಾದ ಕೃತಿ ಎಂದು ಹಾಡಿ ಹೊಗಳಿದ್ದಾರೆ. ಕೇಶಿರಾಜ ಇಲ್ಲಿ ತನ್ನ ಜನ್ಮ ಕುಂಡಲಿಯನ್ನು ಹೇಳಿಕೊಂಡಿದ್ದಾನೆ. ತಾನೂ ಯಾದವ ಕಟಕಾಚರ್ಯ ಕವಿ ಸುಮನೋಬಾಣನ ದೌಹಿತ್ರ(ಮಗಳ ಮಗ)ನೆಂದೂ ಯೋಗಿ ಪ್ರವರ ಚಿದಾನಂದ ಮಲ್ಲಿಕರ್ಜುನನ ಮಗನೆಂದು ಹೇಳಿಕೊಂಡಿದ್ದು ಅಷ್ಟೇ ಅಲ್ಲದೇ ತಾನು ಕವಿ ಹಾಗೂ ಯಾದವ ಕಟಕಾಚರ್ಯನೆಂದೂ ಹಾಗೆ ರ್ಣಾಟಲಕ್ಷಣ ಶಿಕ್ಷಾಚರ್ಯನೆಂದೂ ಘೋಷಿಸಿಕೊಂಡಿದ್ದಾನೆ. ಹಾಗೆಯೆ ಶಬ್ದಮಣಿರ್ದ್ಪಣದ ಕೊನೆಯ ವಾಕ್ಯಗಳಿಂದ ತಿಳಿದುಬರುವಂತೆ ಚೋಳಪಾಲಕ ಚರಿತ, ಶ್ರೀಚಿತ್ರಮಾಲೆ, ಸುಭದ್ರಾಹರಣ, ಪ್ರಭೋಧಚಂದ್ರ ಮತ್ತು ಕಿರಾತ ಈ ಕೃತಿಗಳು ತಾನೆ ಬರೆದಿರುವುದಾಗಿ ತಿಳಿಸಿದ್ದಾನೆ. ಆದರೆ ಈವರೆಗೆ ಇವು ಯಾವ ಕೃತಿಗಳು ಸಹ ನಮಗೆ ಇವತ್ತಿನವರೆಗೂ ಲಭ್ಯವಾಗಿಲ್ಲ. ಕೇಶಿರಾಜನು ಪ್ರಮುಖವಾಗಿ ಹೇಳುವುದೇನೆಂದರೆ ತನ್ನ ಕಾಲದ ಹಿಂದಿನ ವ್ಯಾಕರಣಕಾರರು ಹೇಳಿದ ವಿಚಾರಗಳಲ್ಲಿ ಏನಾದರೂ ಭಿನ್ನಾಭಿಪ್ರಾಯಗಳು ಇದ್ದರೆ ಅದನ್ನು ಪ್ರತ್ಯೇಕವಾಗಿ ಎತ್ತಿ ತೋರಿಸುವ ಕೆಲಸ ಮಾಡಿದ್ದಾನೆ. ಹಾಗೆನೇ ಅವರು ಹೇಳದಿರುವ ವಿಷಯಗಳನ್ನು ಸಹ ಪ್ರಸ್ತಾಪಿಸಿ ತನ್ನ ಗಮನ ಸೆಳೆಯುತ್ತಾನೆ. ಮುಖ್ಯವಾಗಿ ಕೇಶಿರಾಜ ಪ್ರಸ್ತಾಪಿಸುವ ವಿಚಾರಗಳು ಅಂದರೇ ಕ್ಷಳ ವಿಚಾರ, ಎ ಒ ವಿಚಾರ, ಮಹಾಪ್ರಾಣಗಳು, ಐಟ ಘಟಿತ ಶಬ್ದಗಳು, ಸಮಸಂಸ್ಕೃತ ಅಚ್ಚಗನ್ನಡ ಸಮಾಸ, ಮೂರು ಲಿಂಗಗಳು, ಎರಡು ವಚನಗಳು, ಗಮಕ ಸಮಾಸ ಈ ಎಲ್ಲಾ ವಿಷಯಗಳ ಬಗ್ಗೆ ತನ್ನದೇ ಆದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವಂತದ್ದು ಬಹಳ ಮುಖ್ಯವಾಗಿದೆ. ಕ್ಷಳದ ಬಗ್ಗೆ ತನ್ನ ಹಿಂದಿನ ವ್ಯಾಕರಣಕಾರರು ಮಾತನಾಡದೇ ಇರುವುದರಿಂದ ಅದರ ಬಗ್ಗೆ ಖಚಿತವಾದ ವಿವರಣೆ ನೀಡಿ

'ಪೇಳ್ದೆನದಱಿಂ ಕ್ಷಳನಂ' ಎಂದು ಸ್ಪಷ್ಟೀಕರಣ ಕೊಡುತ್ತಾನೆ. (ಸೂ.೧೫) ಕನ್ನಡದಲ್ಲಿ ಏ, ಓ ಗಳ ಬಗ್ಗೆ ಹ್ರಸ್ವರೂಪಗಳು ಕ್ವಚಿತ್ತಾಗಿವೆಯೆಂಬ ವಿಚಾರ ಶಬ್ದಸ್ಮೃತಿಯಲ್ಲಿ ಪರೋಕ್ಷವಾಗಿ ಮತ್ತು ಕರ್ಣಾಟಕ ಭಾಷಾಭೂಷಣದಲ್ಲಿ ನೇರವಾಗಿ ಪ್ರಸ್ತಾಪಿಸಲಾಗಿದೆ. ಆದರೆ ಕೇಶಿರಾಜನಿಗೆ ಎ, ಒ ಗಳ ಬಗ್ಗೆ ಯಾವ ಸಂದೇಹವೂ ಇಲ್ಲ. ಅವನ ಪ್ರಕಾರ ಎ, ಏ, ಒ, ಓ ಅಕ್ಷರಗಳು ಕನ್ನಡದಲ್ಲಿ ಸಹಜವಾಗಿ ಸರ್ಣಗಳು ಎಂಬುದನ್ನು ಸ್ಪಷ್ಟಿಕರಿಸಿದ್ದಾನೆ. (ಸೂ.೧೮) ಶಬ್ದಸ್ಮೃತಿ ಮತ್ತು ರ್ಣಾಟಕ ಭಾಷಾಭೂಷಣ ಪ್ರಕಾರ ಕನ್ನಡದಲ್ಲಿ ಇಲ್ಲದ ಮಹಾಪ್ರಾಣಗಳು ಸಂಖ್ಯಾನುಕರಣಾದಿಗಳಲ್ಲಿ ಮಾತ್ರ ಬಳಕೆಗೊಂಡರೆ ರ್ಬಣಕಾರನ ಪ್ರಕಾರ "ಒಳವು ಮಹಾಪ್ರಾಣಂಗಳ್ವಿಳಸತ್ರ್ಣಾಟ ಭಾಷೆಯೊಳ್ ಕೆಲವು ನಿಜೋಜ್ವಳಮಾಗಿ" (ಸೂ.೨೫) ಎಂದು ಹೇಳುತ್ತಾನೆ.

ಸಮಸಂಸ್ಕೃತ ಪದಗಳು ದೇಶಿಯ ಪದಗಳೊಂದಿಗೆ ಸೇರಿಸಿ ಸಮಾಸ ಮಾಡಬಹುದು ಎಂದು ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳು ಹೇಳಿದರೇ ಕೇಶೀರಾಜನು ಸಮಸಂಸ್ಕೃತ ಪದಗಳು ಅಚ್ಚಗನ್ನಡದಲ್ಲಿ ಬೆರಸಿ ಸಮಾಸ ಮಾಡಲು ಬರುವುದಿಲ್ಲ ಎಂದು ಅದನ್ನು ತೆಗೆದುಹಾಕುತ್ತಾನೆ. (ಸೂ.೯೦) ಹಾಗೆನೆ ಸಂಸ್ಕೃತದಲ್ಲಿ ಒಂಬತ್ತು ವಿಧವಾದ ಲಿಂಗಗಳು ಸಹಜವಾಗಿ ಇದ್ದರೂ ಸಹ ಕನ್ನಡದಲ್ಲಿ "ಪುಂಸ್ತ್ರೀನಪ್" ಎಂಬ ಮೂರೇ ಲಿಂಗಗಳು ಎಂದು ಕೇಶಿರಾಜ ಹೇಳುತ್ತಾನೆ. ಈ ರೀತಿಯ ಸ್ಪಷ್ಟನೆ ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳಲ್ಲಿ ಕಂಡುಬರುವುದಿಲ್ಲ. ವಚನಗಳ ಬಗ್ಗೆ ಮಾತನಾಡುತ್ತಾ ಕವಿರಾಜಮರ್ಗದ ಪ್ರಕಾರ ಎರಡೇ ವಚನಗಳು. ಆದರೇ ಶಬ್ದಸ್ಮೃತಿ ಮತ್ತು ಭಾಷಾಭೂಷಣಗಳ ಪ್ರಕಾರ ಮೂರು ವಚನಗಳು. ಕೇಶಿರಾಜನ ಅಭಿಪ್ರಾಯದಂತೆ ಕನ್ನಡದಲ್ಲಿ ಎರಡೇ ವಚನಗಳು. 'ಸ್ವೀಕಾರಂ ಕನ್ನಡದೋಳಗೇಕೆ ಬಹುತ್ವಂ' ಎಂದು ಹೇಳುತ್ತಾನೆ. ನಾಗವರ್ಮನಿಗೆ ಸಮಾಸಕ್ಕೆ ವಿರುದ್ದವಾಗಿರುವಂತದ್ದು ಗಮಕ, ಆದರೇ ಕೇಶಿರಾಜನಿಗೆ ಗಮಕವೂ ಕೂಡ ಒಂದು ಸಮಾಸ ಎಂದು ಹೇಳುತ್ತಾನೆ.

ಪ್ರಾಚೀನ ಕನ್ನಡ ವ್ಯಾಕರಣ ಕೃತಿಗಳಲ್ಲಿ ಪರಿಗಣಿಸಬೇಕಾದ ಕೊನೆಯ ಕೃತಿ ಭಟ್ಟಕಳಂಕನ ಶಬ್ದಾನುಶಾಸನ. ಸಂಸ್ಕೃತ ಭಾಷೆಯಲ್ಲಿ ಕನ್ನಡ ವ್ಯಾಕರಣ ತತ್ವಗಳನ್ನು ವಿವರಿಸುವ ಬೃಹತ್‌ಕೃತಿ. ಈ ಕೃತಿಯ ರ್ತೃ ಭಟ್ಟಕಳಂಕ. ಹಳಗನ್ನಡ ವ್ಯಾಕರಣ ಕೃತಿಗಳಲ್ಲಿಯೇ ದೊಡ್ಡ ಕೃತಿಯಾಗಿದೆ. ಇದು ಒಟ್ಟು ೫೯೨ ಸೂತ್ರಗಳನ್ನು ಹೊಂದಿದೆ. ಈ ಸೂತ್ರಗಳಿಗೆ ಭಾಷಾಮಂಜರಿ ಎಂಬ ವೃತ್ತಿ ಮತ್ತು ಮಂಜರಿ ಮಕರಂದ ಎಂಬ ವ್ಯಾಖ್ಯಾನವೂ ಇದೆ. ಶಬ್ದಾನುಶಾಸನ ಎಂಬ ಹೆಸರು ಸಂಸ್ಕೃತ ವ್ಯಾಕರಣದ ಅನುಸರಣೆಯಲ್ಲಿ ಉಳಿದ ಕೃತಿಗಳಿಗಿಂತ ಇದು ಹೇಗೆ ಭಿನ್ನವಾಗಿದೆ ಎಂಬುದನ್ನು ತಿಳಿಸುತ್ತದೆ. ಈ ಕೃತಿಯಲ್ಲಿ ಕಾತಂತ್ರ ಮತ್ತು ಶಾಕಟಾಯನ ವ್ಯಾಕರಣದ ನಿರೂಪಣ ಕ್ರಮಕ್ಕಿಂತ ಹೆಚ್ಚಾಗಿ ಪಾಣಿನಿಯ ನಿರೂಪಣ ಪದ್ಧತಿಯನ್ನು ಇಲ್ಲಿ ಅನುಸರಿಸಲಾಗಿದೆ.

ಮುಖ್ಯವಾಗಿ ಕನ್ನಡ ಕವಿಗಳು ಮೊದಲು ಸಂಸ್ಕೃತದಲ್ಲಿ ತಮ್ಮ ಜ್ಞಾನವನ್ನು ವೃದ್ಧಿಸಿಕೊಂಡು ನಂತರ ತಮ್ಮ ಪ್ರತಿಭೆಯನ್ನು ಕನ್ನಡದಲ್ಲಿ ಪ್ರಚುರ ಪಡಿಸಿದರು. ಇವರು ಕನ್ನಡದಲ್ಲಿ ಬರೆಯಲು ತೊಡಗಿದರೂ ಸಹ ಸಂಸ್ಕೃತ ಬರೆಯುವುದನ್ನು ಬಿಡಲಿಲ್ಲ ಎಂಬುದು ಗಮನಾರ್ಹ ಸಂಗತಿ. ಕನ್ನಡ ಭಾಷೆ ಪ್ರಬಲವಾಗುವುದಕ್ಕೆ ಸಂಸ್ಕೃತವೇ ಮೂಲ ಕಾರಣವಾಗಿದೆ. ೧೭ನೇ ಶತಮಾನದಲ್ಲಿ ಭಟ್ಟಕಳಂಕನು ಸಂಸ್ಕೃತ ಪ್ರಚುರವಾದ ವಿದ್ವತ್ ಪ್ರಪಂಚದಲ್ಲಿ ಕನ್ನಡ ಪ್ರತಿಷ್ಠೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಸಂಸ್ಕೃತದಲ್ಲಿ ವ್ಯಾಕರಣವನ್ನು ರಚಿಸಿದನು ಎನ್ನುವಂತ ಕಾರಣ ಹೇಳುತ್ತಾರೆ. ಆದರೆ ಶಾಸನಕ್ಕೆ ಸಂಬಂಧಪಟ್ಟಂತೆ ಕನ್ನಡ ಭಾಷೆಯ ವಿಚಾರವನ್ನು ತಿಳಿದುಕೊಳ್ಳುವ ಮನಸ್ಸು ಇಲ್ಲದೇ ಕನ್ನಡವನ್ನು ಕಡೆಗಣ್ಣಿನಿಂದ ನೋಡುತ್ತಿದ್ದಂತಹ ಸಂಸ್ಕೃತ ಭಾಷಾ ಪಂಡಿತರಿಗೆ ಕನ್ನಡದ ಭಾಷಾಸ್ವರೂಪವನ್ನು ಸಂಸ್ಕೃತದಂತೆ ಕನ್ನಡದಲ್ಲೂ ಸಹಜವಾಗಿರುವ ಸಂಸ್ಕೃತದ ಕನ್ನಡದಲ್ಲಿಯೇ

ತೋರಿಸಿಕೊಡುವಂತಹದ್ದು ಭಟ್ಟಾಕಳಂಕನ ಸಂಕಲ್ಪವಾಗಿತ್ತು ಎಂಬುದು ತಿಳಿದುಬಹುದು. ಸುಧರ್ರ್ಭವಾದ, ಸಮೃದ್ಧವಾದ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ನಾವು ಪ್ರಮುಖವಾಗಿ ನಾಲ್ಕು ವ್ಯಾಕರಣ ಕೃತಿಗಳನ್ನು ಕಾಣುತ್ತೇವೆ. ಇವುಗಳಲ್ಲಿ ಮುಖ್ಯವಾಗಿ ಕೇಶಿರಾಜನ ಶಬ್ದಮಣಿರ್ದ್ಪಣ ಮಾತ್ರ ಪ್ರಮಾಣಿಕವೂ ನಿಷ್ಠವೂ ಆದ ಪ್ರಯತ್ನದ ಫಲವಾಗಿ ಉತ್ತಮ ಕೃತಿಯಾಗಿದೆ. ಅದ್ದರಿಂದಲೇ ಇನ್ನುಳಿದ ಯಾವ ವ್ಯಾಕರಣ ಕೃತಿ ಕೇಶಿರಾಜನ ಕೃತಿಯ ಮುಂದೆ ನಿಲ್ಲದೇ ಹೋಗಿವೆ. ಒಟ್ಟಾರೆ ಈ ನಾಲ್ಕು ವ್ಯಾಕರಣ ಗ್ರಂಥಗಳು ಕಾಲಾನುಕ್ರಮದಲ್ಲಿ ವಿಕಾಸನಗೊಂಡಿವೆ. ಹೀಗೆ ಪ್ರೊ. ಪಿ. ಶ್ರೀಕೃಷ್ಣಭಟ್ಟರು ಕನ್ನಡ ವ್ಯಾಕರಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಕನ್ನಡ ವ್ಯಾಕರಣ ಕ್ಷೇತ್ರದಲ್ಲಿ ಸಂಶೋಧನಾ ಅಧ್ಯಯನ ಕೈಗೊಳ್ಳುವವರಿಗೆ, ವ್ಯಾಕರಣ ಓದಿನ ಆಸಕ್ತರಿಗೆ ಮೂಲ ತಳಹದಿಯಾಗಿದೆ.

## ಸಂದರ್ಭ ಗ್ರಂಥಗಳು

೧) ಭಟ್, ಶ್ರೀಕೃಷ್ಣ ಪಿ. ೨೦೧೨. ಕನ್ನಡ ಸಂಪ್ರದಾಯಿಕ ವ್ಯಾಕರಣಗಳು. ಯಾಜಿ ಪ್ರಕಾಶನ ಹೊಸಪೇಟೆ ಬಳ್ಳಾರಿ.

೨) ಅಂಕದ. ಮುರಿಗೆಪ್ಪ. (ಸಂ.) ೨೦೨೨. ಭಾಷಾವಿಜ್ಞಾನ. ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು.

೩) ಸೇಡಿಯಾಪು ಕೃಷ್ಣಭಟ್ಟ. ೧೯೭೪. ಕನ್ನಡ ವರ್ಣಗಳು. ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೪) ಕೃಷ್ಣಮರ್ತಿ ಕೆ. ೧೯೭೩. ಪಾಣಿನಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೫) ನರಸಿಂಹಚಾರ್ ಡಿ.ಎಲ್. (ಸಂ) ಶಬ್ದಮಣಿದರ್ಪಣಂ, ಶಾರದಾ ಮಂದಿರ, ಮೈಸೂರು.